# ಊನಗೊಂಡ ಹಾವು ಗಿಡುಗ ಹೇಳುತ್ತಿರುವುದೇನು?

**ಬೇಟೆಯ ಕೌಶಲ, ಗಂಭೀರ ನಿಲುವಿನಿಂದ ಅಂತರಿಕ್ಷದ ಅನಭಿಷಕ್ತ ಪ್ರಭೇದವೆಂದೇ ಗುರುತಿಸಿಕೊಂಡಿರುವ ಹಾವು ಗಿಡುಗ ಹಕ್ಕಿಯೊಂದು ವಿದ್ಯುದಾಘಾತಕ್ಕೆ ಸಿಲುಕಿ ನರಳುತ್ತಿತ್ತು. ಅದರ ರಕ್ಷಣಾ ಕಾರ್ಯಾಚರಣೆ ಕುರಿತ ಈ ಬರಹ, ಅರಣ್ಯದ ಮೇಲಿನ ಮಾನವನ ವಿಪರೀತ ಹಸ್ತಕ್ಷೇಪದತ್ತ ಬೆರಳು ಮಾಡುತ್ತಿದೆ.**



ವಿದ್ಯುತ್ ಆಘಾತಕ್ಕೆ ಸಿಲುಕಿ ಹೆಳವನಾದ ಹಾವು ಗಿಡುಗ

**■ ಅಖಿಲೇಶ್ ಚಿಪ್ಪಳಿ**



ಬೆಳಗಿನ ಉಪಾಹಾರದಲ್ಲಿ ತೊಡಗಿಕೊಂಡವನಿಗೆ, ಮನೆಯೆದುರಿನಲ್ಲಿ ಎಡೆಬಿಡದೇ ಬಾರಿಸುತ್ತಿರುವ ಕಾರಿನ ಹಾರ್ನ್ ಶಬ್ದ ಕೇಳಿಸಿತು. ಏನೋ ತುರ್ತು ಇರಬೇಕೆಂದು ದಡಬಡಿಸಿ ಎದ್ದು ಬರುವ ಹೊತ್ತಿಗೆ ಊರಿನ ಗೆಳೆಯ, ಕೈಯಲ್ಲೊಂದು ಪಕ್ಷಿಯನ್ನು ತಲೆಕೆಳಗೆ ಮಾಡಿ ಹಿಡಿದುಕೊಂಡು ಬಂದ. ದೀಪಾವಳಿಯ ಸಮಯದಲ್ಲಿ ಊರಿನ ಭೂತ ದೈವಗಳಿಗೆ ಹುಂಜಗಳನ್ನು ಬಲಿಕೊಡಲು ತೆಗೆದುಕೊಂಡು ಹೋಗುವ ದೃಶ್ಯ ನೆನಪಿಗೆ ಬಂತು.

ಮಳೆಗಾಲವಾದರೂ, ಬಿರುಬೇಸಿಗೆಯಂತಿದ್ದ ಮಲೆನಾಡಿನಲ್ಲಿ ಅಸಲಿ ಮಳೆಗಾಲ ಪ್ರಾರಂಭವೇ ಆಗಿಲ್ಲ. ನಾಟಿ ಹುಂಜದಷ್ಟೇ ದೊಡ್ಡದಾದ ಗಿಡುಗದ ಚೂಪಾದ ಕೊಕ್ಕನ್ನು ನೋಡಿದರೆ ಭಯಪಡುವಂತೆ ಇತ್ತು. ಅದು ಕೈಗೆ ಕಚ್ಚಿ ಗಾಯ ಮಾಡಬಹುದು ಎಂಬ ಮುನ್ನೆಚ್ಚರಿಕೆಯಿಂದ ಗಿಡುಗನನ್ನು ಹಾಗೆ ತಲೆಕೆಳಗಾಗಿ ಹಿಡಿದು ತಂದಿದ್ದ. ನಿಧಾನಕ್ಕೆ ನೆಲಹಾಸಿನ ಮೇಲೆ ಇಟ್ಟು ಪರೀಕ್ಷಿಸಿದಾಗ, ಅದರ ಎದೆಯ ಭಾಗದಲ್ಲೊಂದು ಚಿಕ್ಕ ಗಾಯವಾಗಿತ್ತು. ಉಕ್ಕಿನ ಮೊಳೆಯಷ್ಟು ಚೂಪಾದ ಉಗುರುಗಳನ್ನು ಹೊಂದಿದ ಕಟ್ಟಿಗೆಯಷ್ಟು ಗಟ್ಟಿಯಾದ ಕಾಲುಗಳಿಗೆ ಲಕ್ವಾ ಹೊಡೆದಂತೆ ಆಗಿತ್ತು.

ನಮ್ಮಲ್ಲಿಗೆ ತರುವುದಕ್ಕಿಂತ ಮೊದಲೇ ಪ್ರಥಮ ಚಿಕಿತ್ಸೆಯ ರೂಪದಲ್ಲಿ ಹಾವು ಗಿಡುಗಕ್ಕೆ ನೀರನ್ನು ಕುಡಿಸಲಾಗಿತ್ತು. ತಕ್ಷಣದಲ್ಲಿ ಅದರ ಪ್ರಾಣಕ್ಕೆ ಯಾವ ಅಪಾಯವೂ ಇದ್ದಂತೆ ತೋರಲಿಲ್ಲ. ಪಕ್ಕಾ ಮಾಂಸಾಹಾರಿಯಾದ, ಅದರಲ್ಲೂ ಹೆಚ್ಚಾಗಿ ಹಾವುಗಳನ್ನೇ ಬೇಟೆಯಾಡಿ ತಿನ್ನುವ ಹಾವು ಗಿಡುಗಕ್ಕೆ ಉದರಂಭರಣೆ ಮಾಡಿಸಲು ನಮ್ಮಲ್ಲೇನೂ ಸಾಮಗ್ರಿಯಿರಲಿಲ್ಲ. ಸುಲಭಕ್ಕೆ ಸಿಗಬಹುದಾದ ಓತಿಕ್ಯಾತವನ್ನು ತಂದು ಹಾಕಿದರೂ ತಿನ್ನುವ ಸ್ಥಿತಿಯಲ್ಲಿ ಗಿಡುಗವಿರಲಿಲ್ಲ. ಅದಕ್ಕೆ ತುರ್ತು ಚಿಕಿತ್ಸೆ ಬೇಕಿತ್ತು.

ವನ್ಯಜೀವಿ ತಜ್ಞ ಹಾಗೂ ವನ್ಯಜೀವಿ ವೈದ್ಯರಾದ ಮುರಳಿಯವರಿಗೆ ಕರೆ ಮಾಡಿದೆ. ಶಿವಮೊಗ್ಗದ ತ್ಯಾವರೆಕೊಪ್ಪದ ಸಿಂಹಧಾಮದಲ್ಲಿ ಸೇವೆ ಸಲ್ಲಿಸುವ ಅಪರೂಪದ ವನ್ಯಜೀವಿ ವೈದ್ಯರವರು. ಆದರೆ, 'ಕೆಲಸದ ಮೇಲೆ ಬೆಂಗಳೂರಿನಲ್ಲಿದ್ದೇನೆ. ನೀವು ಸ್ಥಳೀಯ ಅರಣ್ಯಾಧಿಕಾರಿಗಳಿಗೆ ಮಾತನಾಡಿ ಗಾಯಗೊಂಡ ಪಕ್ಷಿಯನ್ನು ಶಿವಮೊಗ್ಗಕ್ಕೆ ಕಳುಹಿಸಿ. ನಾವು ಅದರ ಜವಾಬ್ದಾರಿ ಹೊರುತ್ತೇವೆ' ಎಂದರು. ಸ್ಥಳೀಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಕರೆ ಮಾಡಿ ವಿಷಯ ತಿಳಿಸಿದೆ. ಇನ್ನರ್ಧ ಗಂಟೆಯಲ್ಲಿ ಇಲಾಖೆಯವರನ್ನು ಕಳುಹಿಸಿ, ಅದನ್ನು ತ್ಯಾವರೆಕೊಪ್ಪದ ಹುಲಿ–ಸಿಂಹಧಾಮಕ್ಕೆ ಕಳುಹಿಸುವ ಭರವಸೆ ನೀಡಿದರು.

ಅಂಗಳದಲ್ಲಿ ಬಿಸಿಲು ಹೆಚ್ಚಾಯಿತು. ಮತ್ತೆ ನಿರ್ಜಲೀಕರಣಗೊಂಡರೆ ಕಷ್ಟವೆಂದು ಅದನ್ನು ನಿಧಾನವಾಗಿ ರೆಕ್ಕೆಗಳ ಸಮೇತ ಹಿಡಿದೆತ್ತಿ ಮನೆಯ ಒಳಭಾಗದಲ್ಲಿ ಇಟ್ಟೆವು. ಟೈಲ್ಸ್ ಅಳವಡಿಸಿದ ನೆಲ ತುಸು ಹೆಚ್ಚೇ ತಣ್ಣಗಿತ್ತೋ ಅಥವಾ ಭಯದಿಂದ ಗಾಬರಿಗೊಂಡಿತ್ತೋ, ಗಿಡುಗ ಸಣ್ಣಗೆ ನಡುಗಲು ಪ್ರಾರಂಭಿಸಿತು. ಗೋಣಿಚೀಲವನ್ನು ಹಾಸಿ ಅದರ ಮೇಲೆ ಗಿಡುಗವನ್ನು ಇಡಬೇಕೆಂದು, ಇಡೀ ಮನೆ ಹುಡುಕಿದರೆ ಒಂದು ಗೋಣಿಯೂ ಲಭ್ಯವಾಗಲಿಲ್ಲ. ಪ್ಲಾಸ್ಟಿಕ್ ಚೀಲಗಳು ಮುನ್ನೆಲೆಗೆ